## ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 233

2) ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

3) ಉತ್ತರಿಸುವ ದಿನಾಂಕ : 06/07/2023

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ವಿಭಾಗದ ಗಿರಿನಗರ ಅರಕ್ಷಕ ಠಾಣೆಯು ದೀರ್ಘಕಾಲದಿಂದ ಬಾಡಿಗೆ ಕಟ್ಟಡದಲ್ಲಿದ್ದು, ಸದರಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಸದರಿ ಕಟ್ಟಡವು ತುಂಬಾ ಚಿಕ್ಕದಾಗಿದ್ದು, ಕಚೇರಿ ಕೆಲಸ ಕಾರ್ಯನಿರ್ವಹಿಸುವುದು ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಸದರಿ ಕಟ್ಟಡವು ಪೊಲೀಸ್ ಠಾಣೆಯ ದೈನಂದಿನ ಕೆಲಸ ಕಾರ್ಯನಿರ್ವಹಣೆ ಮಾಡುವಷ್ಟು ಸ್ಥಳಾವಕಾಶ ಹೊಂದಿರುತ್ತದೆ. |
| ಇ) | ಇಲಾಖೆಯಿಂದ ಸ್ವಂತ ಕಟ್ಟಡ ಕಟ್ಟಲು ಇದುವರೆವಿಗೂ ಕ್ರಮ ವಹಿಸದಿರಲು ಕಾರಣಗಳೇನು; | ಗಿರಿನಗರ ಪೊಲೀಸ್ ಠಾಣಾ ಕಟ್ಟಡಕ್ಕಾಗಿ ಪೊಲೀಸ್ ಇಲಾಖೆಗೆ ಸೇರಿದ ಸಿ.ಎ ನಂ.04 ರಲ್ಲಿ 120*120 ನಿವೇಶನಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ :24322/2019ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ವಿಚಾರಣೆ ನಡೆಸಿ, ದಿನಾಂಕ.11/02/2020 ರಂದು ನೀಡಿರುವ ತೀರ್ಪಿನಲ್ಲಿ ಉತ್ತರಹಳ್ಳಿ ಹೋಬಳಿ, ಅವಲಹಳ್ಳಿ ಗ್ರಾಮ ಸಿ.ಎ ನಂ.04ರ ಜಾಗದಲ್ಲಿ ರಾಜ್ಯ ಸರ್ಕಾರವು ನ್ಯಾಯಾಲಯದ ಅನುಮತಿ ಪಡೆಯದೇ ಪೊಲೀಸ್ ಠಾಣೆ ಕಟ್ಟಡವನ್ನು ನಿರ್ಮಾಣ ಮಾಡಬಾರದೆಂದು ಹಾಗೂ ತಂತಿಬೇಲಿ ಹಾಕಿರುವ ಜಾಗವನ್ನು ಒತ್ತುವರಿಯಾಗದಂತೆ ಮುಂದಿನ ಆದೇಶದವರೆಗೂ ಕಾಯ್ದುಕೊಳ್ಳಲು ತೀರ್ಪು ನೀಡಲಾಗಿರುತ್ತದೆ. |
| ಈ) | ಸದರಿ ಠಾಣೆಗೆ ಕಟ್ಟಡ ಕಟ್ಟಲು ನಿವೇಶನ ಗುರುತಿಸಲಾಗಿದೆಯೆ; | ಪೊಲೀಸ್ ಇಲಾಖೆಗೆ ಸೇರಿದ ಉತ್ತರಹಳ್ಳಿ ಹೋಬಳಿ, ಅವಲಹಳ್ಳಿ ಗ್ರಾಮದ ಸಿ.ಎ ನಂ.04 ರಲ್ಲಿ 120*120 ನಿವೇಶನದಲ್ಲಿ ನೂತನವಾಗಿ ಗಿರಿನಗರ ಪೊಲೀಸ್ ಠಾಣೆ ನಿರ್ಮಾಣ ಮಾಡಲು ಗುರುತಿಸಲಾಗಿದೆ. ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪು ಹಾಗೂ ಅನುದಾನ ಲಭ್ಯತೆಯನ್ನಾಧರಿಸಿ ಪರಿಶೀಲಿಸಲಾಗುತ್ತದೆ. |
| ಉ) | ಸಾರ್ವಜನಿಕ ಹಿತದೃಷ್ಟಿಯಿಂದ ಯಾವ ಕಾಲಮಿತಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗುವುದು? | |

ಹೆಚ್‌ಡಿ 35 ಪಿಬಿಎಲ್ 2023

(ಡಾ// ಜಿ. ಪರಮೇಶ್ವರ)
ಗೃಹ ಸಚಿವರು